Date : 22-9-2015

# ಆಮದಿತ ಬೇಳೆಕಾಳು ಸೆಪ್ಟೆಂಬರ್ 23 ರೊಳಗೆ ಭಾರತ ತಲುಪುವ ನಿರೀಕ್ಷೆ

ಅವಶ್ಯಕ ವಸ್ತುಗಳ ಲಭ್ಯತೆ ಮತ್ತು ದರದ ವಿಷಯದಲ್ಲಿ ನಡೆದ ಮಂತ್ರಿಗಳ ಕಮಿಟಿ ಸಭೆಯಲ್ಲಿ 2500 ಟನ್‌ಗಳು ತೊಗರಿ ಬೇಳೆ 3 ಟ್ರೆಂಚ್‌ಗಳ ಕಂಟೈನರ್‌ಗಳಲ್ಲಿ ಚೆನ್ನೈ ಬಂದರು ಮತ್ತು ಇನ್ನೊಂದು 2500 ಟನ್‌ಗಳ ತೊಗರಿ 4 ಟ್ರೆಂಚ್‌ಗಳಲ್ಲಿ ಕಂಟೈನರ್‌ನಲ್ಲಿ ಚೆನ್ನೈ ಬಂದರಿಗೆ ಸೆಪ್ಟೆಂಬರ್ 23ರ ನಂತರ ತಲುಪುವ ವಿಷಯ ತಿಳಿಸಲಾಗಿದೆ. ಒಟ್ಟು 5000 ಮಿಲಿಯನ್ ಟನ್ ಅಕ್ಟೋಬರ್ 20ರೊಳಗೆ ತಲುಪಲಿದೆ ಮತ್ತು ಪರಿಸ್ಥಿತಿ ಉತ್ತಮ ಪಡಿಸಲು, ಹೆಚ್ಚುವರಿ 5000 ಟನ್‌ಗಳ ತೊಗರಿ ಆಮದಿಗೆ ಎಂಎಂಟಿಸಿ ಈಗಾಗಲೇ ಟೆಂಡರ್ ಕರೆದಿದ್ದು, ಸೆಪ್ಟೆಂಬರ್ 21ರ ತನಕ ಜಾರಿಯಲ್ಲಿರಲಿದೆ. 5000 ಟನ್‌ಗಳ ಉದ್ದು ಮ್ಯಾನ್ಮಾರ್‌ನಿಂದ ಚೆನ್ನೈ ಮತ್ತು ಜೆಎನ್‌ಪಿಟಿ ಬಂದರ್‌ಗಳಿಗೆ ಅಕ್ಟೋಬರ್ 20, 2015ರೊಳಗೆ ತಲುಪುವ ನಿರೀಕ್ಷೆ ಇದೆ. ಇದರೊಂದಿಗೆ ನೀರುಳ್ಳಿ ಆಮದು ಲಭ್ಯವಾಗಲಿದೆ. ಅವಶ್ಯಕ ವಸ್ತುಗಳ ಲಭ್ಯತೆ ಸ್ಥಿತಿ ಉತ್ತಮವಿರಲು ಆಮದು ಮಾಡಲಾಗುತ್ತಿದ್ದು ಪರಿಸ್ಥಿತಿ ಅವಲೋಕಿಸಲು ಮಂತ್ರಿಗಳ ಕಾರ್ಯದರ್ಶಿ ಮಟ್ಟದ ಸಭೆ ನಡೆಯುತ್ತಿದೆ.